ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ೧೯೮೬-೮೭ನೇ ಆರ್ಥಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೫೮.೦೮ ಕೋಟಿ ರೂ.ಗಳ ವೆಚ್ಚದಲ್ಲಿ ಹಳೇ ಬಸ್ಸುಗಳ ಬದಲಿಗಾಗಿ ೮೦೭ ಬಸ್ಸುಗಳನ್ನು ಮತ್ತು ಹೆಚ್ಚುವರಿ ಬಳಕೆಗಾಗಿ ೯೯ ಬಸ್ಸುಗಳು ಸೇರಿದಂತೆ ಒಟ್ಟು ೧೭೩೬ ಹೊಸ ವಾಹನಗಳನ್ನು ಖರೀದಿಸಿರುತ್ತದೆ.

೧೯೮೭-೮೮ನೇ ಸಾಲಿನಲ್ಲಿ ೪೧.೮೩ ಕೋಟಿ ರೂ. ಗಳ ವೆಚ್ಚದಲ್ಲಿ ೧೨೪೯ ಹೊಸ ವಾಹನಗಳನ್ನು ಖರೀದಿಸುವ ಯೋಜನೆಯನ್ನು ಸದರೀ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ನಿಗಧಿಪಡಿಸಲಾಗಿದೆ. ಸದರೀ ಸಾಲಿನ ಡಿಸೆಂಬರ್ ಅಂತ್ಯದ ವೇಳೆಗೆ ೯೭೨ ಹೊಸ ಬಸ್ಸುಗಳನ್ನು ಖರೀದಿಸಿರಂತ್ತದೆ. ಇದರ ಬಾಬ್ತು ೩೨.೫೬ ಕೋಟಿ ರೂ.ಗಳಾಗಿರುತ್ತದೆ.

ಆ) ೧೯೭೫-೭೬ನೇ ಸಾಲಿನಿಂದಲೂ (೧೯೭೬-೭೭ರ ವಿನಃ ಸಂಸ್ಥೆಯು ನಷ್ಟವನ್ನು ಅನುಭವಿಸಿರುತ್ತದೆ. ೧೯೮೭-೮೮ನೇ ಸಾಲಿನ ಪರಿಷ್ಕೃತ ಅಂದಾಜಿನ ಪ್ರಕಾರ ೧೧.೪೯ ಕೋಟಿ ರೂ.ಗಳು ನಷ್ಟ ಸಂಭವಿಸಬಹುದೆಂದು ನಿರೀಕ್ಷಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿರುವ ಪೋಲೀಸ್ ಸೆಂಟರನ್ನು ಮೂಗೋಡಿಗೆ ವರ್ಗಾಯಿಸಿರುವುದು

೩೩೧. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ),—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಇದ್ದ ಪೋಲೀಸ್ ತರಬೇತಿ ಕೇಂದ್ರವನ್ನು ಮೂಗೋಡಿಗೆ ವರ್ಗಾಯಿಸಿರುವುದಕ್ಕೆ ಕಾರಣಗಳೇನು ?

ಆ) ಮೂಗೋಡಿನಲ್ಲಿನ ಕೇಂದ್ರದ ಕಟ್ಟಡಕ್ಕೆ ನೀಡುತ್ತಿದ್ದ ಬಾಡಿಗೆ ಹಾಗೂ ರಾಯಾಪುರದಲ್ಲಿ ಕೊಡುತ್ತಿದ್ದ ಬಾಡಿಗೆ ಹಣದ ಮೊತ್ತವೆಷ್ಟು ?

ಇ) ಈ ತರಬೇತಿ ಕೇಂದ್ರದಲ್ಲಿರುವ ಸಬ್‌ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು ? ಅದರಲ್ಲಿ ಈ ಸಾಲಿನಲ್ಲಿ ನಿವೃತ್ತಿ ಹೊಂದಲಿರುವವರೆಷ್ಟು ? ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ?

ಈ) ರಾಯಾಪುರದಲ್ಲಿ ವರ್ಷದಲ್ಲಿ ತರಬೇತಿ ಕೊಡುತ್ತಿದ್ದ ಅವಧಿ ಎಷ್ಟು, ಹಾಗೂ ಮೂಗೋಡಿನಲ್ಲಿ ತರಬೇತಿ ಅವಧಿ ಎಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—

ಅ) ಧಾರವಾಡ ಜಿಲ್ಲೆ ರಾಯಾಪುರದಲ್ಲಿದ್ದ ಪೋಲೀಸ್ ತರಬೇತಿ ಶಾಲೆಯು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ನೀಡಲು ಅನಾನುಕೂಲವಾದ್ದರಿಂದ ಅದನ್ನು ಮೂಗೋಡಿಗೆ ವರ್ಗಾಯಿಸಲಾಯಿ ೦.

ಆ) ಮೂಗೋಡಿನಲ್ಲಿ ಕೊಡುತ್ತಿರುವ ವಾರ್ಷಿಕ ಬಾಡಿಗೆ ರೂ. ೩೨,೫೬,೩೬೦-೦೦, ರಾಯಾಪುರದಲ್ಲಿ ಕೊಡುತ್ತಿರುವ ವಾರ್ಷಿಕ ಬಾಡಿಗೆ ರೂ. ೯೩,೪೨೫-೦೦.

ಇ) ಮೂಗೋಡಿನಲ್ಲಿ ಹಾಲಿ ೧೦ ಜನ ಸಬ್‌ಇನ್ಸ್‌ಪೆಕ್ಟರ್‌ಗಳು ಕೆಲಸದಲ್ಲಿದ್ದಾರೆ. ಇವರಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು ಮತ್ತೊಬ್ಬರು ಪರಿಶಿಷ್ಟ ವರ್ಗಕ್ಕೆ ಸೇರಿದವರು. ಈ ಸಾಲಿನಲ್ಲಿ ಒಬ್ಬರು ಸಬ್ ಇನ್ಸ್‌ಪೆಕ್ಟರ್ ಮಾತ್ರ ೩೧-೧-೮೮ಕ್ಕೆ ನಿವೃತ್ತಿ ಹೊಂದಿದ್ದಾರೆ, ಅವರು ಪರಿಶಿಷ್ಟ ಜಾತಿಗೆ ಸೇರಿದವರು.

ಈ) ಎರಡೂ ಕಡೆಯೂ ತರಬೇತಿ ಅವಧಿ ೯ ತಿಂಗಳು.